ಕರ್ನಾಟಕ ಸರ್ಕಾರ

# ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕಸಂಇ/Covid-19/2020

ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು-2, ದಿನಾಂಕ: 21-04-2020

## ಸುತ್ತೋಲೆ

ವಿಷಯ: Covid-19 ಕೊರೋನಾ ರೋಗಾಣುವಿನಿಂದ ಆರ್ಥಿಕವಾಗಿ ಸಂಕಷ್ಟದಲ್ಲಿರುವ ಕಲಾವಿದರು/ಸಾಹಿತಿಗಳಿಗೆ ಆರ್ಥಿಕ ಸಹಾಯ ಮಾಡುವ ಕುರಿತು

ಉಲ್ಲೇಖ: ಮಾನ್ಯ ಇಲಾಖಾ ಸಚಿವರ ಅಧ್ಯಕ್ಷತೆಯಲ್ಲಿ ದಿನಾಂಕ: 20.04.2020 ರಂದು ನಡೆದ ಸಭಾ ನಡವಳಿ.

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ದಿನಾಂಕ: 20.04.2020 ರಂದು ಇಲಾಖೆ ಸಚಿವರಾದ ಮಾನ್ಯ ಶ್ರೀ ಸಿ. ಟಿ. ರವಿ ರವರ ಅಧ್ಯಕ್ಷತೆಯಲ್ಲಿ ಜರುಗಿದ ಸಭೆಯಲ್ಲಿ ನಡೆದ ಸಭಾ ನಡವಳಿ. ಪ್ರಸ್ತುತ Covid-19 ಕೊರೋನಾ ರೋಗಾಣುವಿನಿಂದ ಇಡೀ ರಾಜ್ಯ ಲಾಕ್‌ಡೌನ್ ಮತ್ತು ಸೀಲ್‌ಡೌನ್ ಆಗಿದ್ದು, ಇದರಿಂದಾಗಿ ಅನೇಕ ಜನ ಕಲಾವಿದರು/ಸಾಹಿತಿಗಳು ಸಂಕಷ್ಟದಲ್ಲಿದ್ದು, ಇವರಿಗೆ ತಲಾ ರೂ. 2,000/-ಗಳನ್ನು ಅವರ ಬ್ಯಾಂಕ್ ಖಾತೆಗೆ ನೇರವಾಗಿ ಜಮೆ ಮಾಡಲು ಮಾನ್ಯ ಮುಖ್ಯಮಂತ್ರಿಗಳಲ್ಲಿ ರೂ.2.00 ಕೋಟಿ ಮಂಜೂರು ಮಾಡುವಂತೆ ವಿನಂತಿಸಿದೆ. ಇದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಸಕಾರಾತ್ಮಕವಾಗಿ ಸ್ಪಂದಿಸಿದ್ದು, ಅನುದಾನ ನೀಡುವುದಾಗಿ ಭರವಸೆ ನೀಡಿದ್ದಾರೆ ಎಂದು ತಿಳಿಸಿದ್ದಾರೆ.

ಆದ್ದರಿಂದ ಎಲ್ಲಾ ಜಿಲ್ಲೆಗಳ ಸಹಾಯಕ ನಿರ್ದೇಶಕರು ಮತ್ತು ಎಲ್ಲಾ ಅಕಾಡೆಮಿಗಳ ಮತ್ತು ಪ್ರಾಧಿಕಾರಗಳ ರಿಜಿಸ್ಟ್ರಾರ್‌ಗಳು ಈ ಕೆಳಗಿನ ಮಾರ್ಗ ಸೂಚಿ ಒಳಗೊಂಡಂತೆ ಪತ್ರಿಕಾ ಪ್ರಕಟಣೆ ನೀಡುವ ಮುಖಾಂತರ ಅರ್ಜಿಯನ್ನು ಆಹ್ವಾನಿಸಿ ತುರ್ತಾಗಿ ಕಲಾ ಪ್ರಕಾರವಾರು ವಿಂಗಡಿಸಿ ದಿನಾಂಕ: 29.04.2020 ಒಳಗೆ ಈಗಾಗಲೇ ಕಳುಹಿಸಲಾದ ನಮೂನೆಯಲ್ಲಿ Soft (ಕಡ್ಡಾಯವಾಗಿ ಯುನಿಕೋಡಲ್ಲಿರಬೇಕು)ಪ್ರತಿಯನ್ನು ಇಲಾಖೆಯ E-mail ಕಳುಹಿಸಿ ಕೊಡಲು ಸೂಚಿಸಿದೆ.

**ಮಾರ್ಗ ಸೂಚಿಗಳು:**

1. ಆರ್ಥಿಕ ಸಂಕಷ್ಟದಲ್ಲಿರುವ ಎಲ್ಲಾ ಕಲಾ ಪ್ರಕಾರದ ಕಲಾವಿದರು/ಸಾಹಿತಿಗಾಳಗಿರಬೇಕು.
2. ಕಲಾವಿದರು/ಸಾಹಿತಿಗಳು 10 ವರ್ಷ ಕಲಾ ಸೇವೆ ಸಲ್ಲಿಸಿರಬೇಕು.
3. ವೃತ್ತಿನಿತರ ಕಲಾವಿದರಾಗಿದ್ದು, ಆರ್ಥಿಕವಾಗಿ ಸಂಕಷ್ಟದಲ್ಲಿ ಇರುವವರಾಗಿರಬೇಕು.
4. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಮಾಸಾಶನ ಪಡೆಯುತ್ತಿರುವವರು ಇದಕ್ಕೆ ಅರ್ಹರಿರುವುದಿಲ್ಲ.
5. ಸರ್ಕಾರಿ ನೌಕರರಾಗಿರಬಾರದು.(ರಾಜ್ಯ/ ಕೇಂದ್ರ/ ನಿಗಮ ಮಂಡಳಿ/ ಸರ್ಕಾರಿ ಅನುದಾನಿತ ಸಂಸ್ಥೆಗಳು ಮತ್ತು ಅರೆ ಸರ್ಕಾರಿ ಸಂಸ್ಥೆಗಳು).

Kiran Raghupathi

6. ಕಲಾವಿದರು/ಸಾಹಿತಿಗಳ ಹೆಸರು, ವಿಳಾಸ, ಆಧಾರ ಸಂಖ್ಯೆ, ದೂರವಾಣಿ ಸಂಖ್ಯೆ ಮತ್ತು ಬ್ಯಾಂಕ್ ವಿವರ ಪಡೆಯುವುದು.
7. ತಪ್ಪು ಮಾಹಿತಿ ನೀಡಿ ಇದರ ಲಾಭ ಪಡೆದವರ ಮೇಲೆ ವಿಪತ್ತು ನಿರ್ವಹಣಾ ಅಧಿನಿಯಮದನ್ವಯ ಕಾನೂನು ಕ್ರಮ ಜರುಗಿಸಲಾಗುವುದು.

21/4/2020

(ಎಸ್. ರಂಗಪ್ಪ)
ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಬೆಂಗಳೂರು

ಇವರಿಗೆ

1. ಎಲ್ಲಾ ಜಿಲ್ಲೆಯ ಸಹಾಯಕ ನಿರ್ದೇಶಕರಿಗೆ ಅಗತ್ಯ ಕ್ರಮ ಕೈಗೊಳ್ಳಲು ಸೂಚಿಸಿದೆ.
2. ಎಲ್ಲಾ ಅಕಾಡೆಮಿ /ಪ್ರಾಧಿಕಾರಗಳ ರಿಜಿಸ್ಟ್ರಾರ್ ಅಗತ್ಯ ಕ್ರಮ ಕೈಗೊಳ್ಳಲು ಸೂಚಿಸಿದೆ.

ಪತ್ರಿಯನ್ನು

3. ಜಂಟಿ ನಿರ್ದೇಶಕರು (ಆ)(ಕಾ), (ಸು.ಕ.)(ಸಾ) ಸಂಬಂಧಿಸಿದ ವಿಭಾಗದ ಮಾಹಿತಿಯನ್ನು ತಕ್ಷಣ ಪಡೆದು ಕ್ರಮವಹಿಸುವುದು.
4. ಕಡತಕ್ಕೆ

Kiran Raghupathi